# 1 ಉತ್ತರ ಕರ್ನಾಟಕದ ಎಲ್ಲಾ ಕೃಷಿ ವಲಯಗಳ ವೈಶಿಷ್ಟ್ಯತೆಗಳು

ಉತ್ತರ ಕರ್ನಾಟಕ ಜಿಲ್ಲೆಗಳೆಂದೇ ಕರೆಯಲ್ಪಡುವ 13 ಜಿಲ್ಲೆಗಳಾದ ವಿಜಯಪುರ , ಬಾಗಲಕೋಟ, ಧಾರವಾಡ, ಗದಗ, ಹಾವೇರಿ, ಬೆಳಗಾವಿಮತ್ತು ಉತ್ತರ ಕನ್ನಡ ಇವು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಹಾಗೂ ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಯಾದಗಿರಿ, ಬಳ್ಳಾರಿ ಜಿಲ್ಲೆಗಳು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆಡಳಿತದ ವ್ಯಾಪ್ತಿಯಲ್ಲಿವೆ.

ಈ ಎಲ್ಲ ಜಿಲ್ಲೆಗಳ ಹವಾಗುಣ, ಮಣ್ಣಿನ ಗುಣಧರ್ಮ, ಮಳೆ ಪ್ರಮಾಣ ಹಾಗೂ ಇನ್ನಿತರ ಕೃಷಿ ಸ್ಥಿತಿಗತಿಗಳನ್ನು ಆಧರಿಸಿ ಈ ಕೆಳಗಿನಂತೆ ವಿವಿಧ ವಲಯಗಳನ್ನಾಗಿ ವಿಂಗಡಿಸಲಾಗಿದೆ.

ಈಶಾನ್ಯ ಅರೆಮಲೆನಾಡು (ವಲಯ-1), ಈಶಾನ್ಯ ಒಣ ಪ್ರದೇಶ (ವಲಯ-2), ಉತ್ತರ ಒಣ ಪ್ರದೇಶ (ವಲಯ-3), ಮಧ್ಯಭಾಗದ ಅರೆಮಲೆನಾಡು ಪ್ರದೇಶ (ವಲಯ-8), ಗುಡ್ಡಗಾಡು ಪ್ರದೇಶ (ವಲಯ-9), ಮತ್ತು ಕರಾವಳಿ ಪ್ರದೇಶ (ವಲಯ-10) ಈ ವಲಯಗಳಲ್ಲಿ ಬರುವ ಜಿಲ್ಲೆಗಳು ಮತ್ತು ತಾಲೂಕುಗಳ ವಿವರ ಮಾಹಿತಿಯು ಈ ಕೆಳಗಿನ ಕೋಷ್ಟಕದಲ್ಲಿದೆ.

| ಕ್ರ. ಸಂ. | ಪ್ರದೇಶ/ವಲಯ | ಜಿಲ್ಲೆಗಳು | ತಾಲೂಕುಗಳು |
|---|---|---|---|
| 1 | 2 | 3 | 4 |
| 1 | **ಪ್ರದೇಶ-1** | | |
| ಅ. | ವಲಯ-1 (ಈಶಾನ್ಯ ಅರೆಮಲೆನಾಡು) | ಬೀದರ್ | ಎಲ್ಲಾ ತಾಲೂಕುಗಳು |
| | | ಗುಲ್ಬರ್ಗಾ | ಆಳಂದ ಮತ್ತು ಚಿಂಚೋಳಿ ತಾಲೂಕುಗಳು |
| ಆ. | ವಲಯ-2 (ಈಶಾನ್ಯ ಒಣ ವಲಯ) | ರಾಯಚೂರು | ರಾಯಚೂರು, ದೇವದುರ್ಗ, ಮಾನ್ವಿ |
| | | ಗುಲ್ಬರ್ಗಾ | ಆಳಂದ, ಚಿಂಚೋಳಿ, ಬಿಟ್ಟು ಉಳಿದ ಎಲ್ಲಾ ತಾಲೂಕುಗಳು |
| | | ಯಾದಗಿರಿ | ಸುರಪುರ, ಶಹಾಪೂರ, ಯಾದಗಿರಿ |



| 1 | 2 | 3 | 4 |
|---|---|---|---|
| **2.** | **ಪ್ರದೇಶ-2** | | |
| ಅ. | ವಲಯ -3 (ಉತ್ತರ ಒಣ ಪ್ರದೇಶ) | ವಿಜಯಪುರ | ಬಸವನ ಬಾಗೇವಾಡಿ, ಬಿಜಾಪುರ, ಇಂಡಿ, ಮುದ್ದೇಬಿಹಾಳ್, ಸಿಂದಗಿ. |
| | | ಬಳ್ಳಾರಿ | ಬಳ್ಳಾರಿ, ಹಡಗಲಿ ಹೊಸಪೇಟೆ, ಕೂಡಲಗಿ, ಹಗರಿಬೊಮ್ಮನಹಳ್ಳಿ, ಸಂಡೂರು, ಶಿರಗುಪ್ಪಾ. |
| | | ರಾಯಚೂರು | ಲಿಂಗಸಗೂರು, ಸಿಂಧನೂರು. |
| | | ಕೊಪ್ಪಳ | ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ |
| | | ಬಾಗಲಕೋಟ | ಬಾಗಲಕೋಟ, ಬಾದಾಮಿ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ |
| | | ಗದಗ | ಗದಗ, ರೋಣ, ಮುಂಡರಗಿ, ನರಗುಂದ. |
| | | ದಾವಣಗೆರೆ | ಹರಪನಹಳ್ಳಿ |
| | | ಧಾರವಾಡ | ನವಲಗುಂದ |
| | | ಬೆಳಗಾವಿ | ಸವದತ್ತಿ, ರಾಯಬಾಗ, ಅಥಣಿ, ಗೋಕಾಕ್, ರಾಮದುರ್ಗ. |
| **3.** | **ಪ್ರದೇಶ-4** | | |
| | ವಲಯ-8 (ಉತ್ತರ ಅರೆ ಮಲೆನಾಡು ಪ್ರದೇಶ) | ಧಾರವಾಡ | ಧಾರವಾಡ, ಹುಬ್ಬಳ್ಳಿ, ಕುಂದಗೋಳ. |
| | | ಹಾವೇರಿ | ಬ್ಯಾಡಗಿ, ಹಾವೇರಿ,ಹಿರೇಕೆರೂರು, ರಾಣೇಬೆನ್ನೂರು, ಸವಣೂರು , ಶಿಗ್ಗಾಂವ. |
| | | ಬೆಳಗಾವಿ | ಬೆಳಗಾವಿ, ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ. |
| | | ಗದಗ | ಶಿರಹಟ್ಟಿ |
| **4.** | **ಪ್ರದೇಶ-5** ವಲಯ-9 (ಮಲೆನಾಡು ಪ್ರದೇಶ) | ಧಾರವಾಡ | ಕಲಘಟಗಿ |
| | | ಹಾವೇರಿ | ಹಾನಗಲ್ |
| | | ಬೆಳಗಾವಿ | ಖಾನಾಪುರ |

| 1 | 2 | 3 | 4 |
|---|---|---|---|
| | | ಉತ್ತರ ಕನ್ನಡ | ಶಿರಸಿ, ಸಿದ್ದಾಪುರ, ಯಲ್ಲಾಪುರ, ಜೋಯಿಡಾ, ಹಳಿಯಾಳ, ಮುಂಡಗೋಡ |
| 5. | **ಪ್ರದೇಶ-6** ವಲಯ-10 (ಕರಾವಳಿ ಪ್ರದೇಶ) | ಉತ್ತರ ಕನ್ನಡ | ಕಾರವಾರ, ಕುಮಟ, ಭಟ್ಕಳ, ಹೊನ್ನಾವರ, ಅಂಕೋಲ. |

## ವಲಯ -1

ಈಶಾನ್ಯದ ಅರೆಮಲೆನಾಡು ಪ್ರದೇಶ, ಕೃಷಿ ವಲಯಗಳಲ್ಲೇ ಅತಿ ಚಿಕ್ಕವಾಗಿದ್ದು ಸಂಪೂರ್ಣ ಬೀದರ ಜಿಲ್ಲೆ ಮತ್ತು ಕಲಬುರ್ಗಿಯ ಆಳಂದ ಮತ್ತು ಚಿಂಚೋಳಿ ತಾಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶದ ಭೌಗೋಳಿಕ ವಿಸ್ತೀರ್ಣ 8.71 ಲಕ್ಷ ಹೆಕ್ಟೇರುಗಳಾಗಿದ್ದು ಅದರಲ್ಲಿ 6.15 ಲಕ್ಷ ಹೆಕ್ಟೇರುಗಳು ಸಾಗುವಳಿಗೆ ಒಳಪಟ್ಟಿದೆ. ಈಶಾನ್ಯದ ಈ ಅರೆಮಲೆನಾಡು ಪ್ರದೇಶದಲ್ಲಿ 0.47 ಲಕ್ಷ ಹೆಕ್ಟೇರ ನೀರಾವರಿ ಸೌಲಭ್ಯ ಪಡೆದಿದೆ. ಈ ವಲಯದ ಸರಾಸರಿ ವಾರ್ಷಿಕ ಮಳೆಯು 870 ಮಿ.ಮೀ. ಇದ್ದು ಜೂನ್‌ನಿಂದ ಅಕ್ಟೋಬರ್ ತಿಂಗಳಿನವರೆಗೆ ಮಳೆಯ ಸಾಮಾನ್ಯ ಹಂಚಿಕೆ ಇದ್ದು, ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಾಗಿರುತ್ತದೆ. ಆದುದರಿಂದ, ವರ್ಷದಲ್ಲಿ ಎರಡು ಬೆಳೆಗಳನ್ನು (ಮುಂಗಾರು ಮತ್ತು ಹಿಂಗಾರು) ಬೆಳೆಯಲು ಅನುಕೂಲಕರವಾಗಿದೆ. ಹೀಗಾಗಿ ಈ ಪ್ರದೇಶವು ಹೆಚ್ಚಿನ ಉತ್ಪಾದನಾ ಸಾಮರ್ಥ್ಯ ಪಡೆದಿದೆ. ವಿವಿಧ ಆಳದ ಜಂಬಿಟ್ಟಿಗೆ ಮತ್ತು ಕಪ್ಪು ಮಣ್ಣುಗಳು ಈ ವಲಯದ ಪ್ರಮುಖ ಮಣ್ಣಿನ ವಿಧಗಳಾಗಿವೆ.

## ವಲಯ-2

ಈಶಾನ್ಯದ ಒಣ ಪ್ರದೇಶವು ರಾಯಚೂರು ಜಿಲ್ಲೆಯ ದೇವದುರ್ಗ, ಮಾನ್ವಿ ಮತ್ತು ರಾಯಚೂರು ತಾಲೂಕುಗಳನ್ನು ಮತ್ತು ಕಲಬುರ್ಗಿ ಜಿಲ್ಲೆಯ ಆಳಂದ ಹಾಗೂ ಚಿಂಚೋಳಿ ತಾಲೂಕುಗಳನ್ನು ಹೊರತು ಪಡಿಸಿ ಉಳಿದೆಲ್ಲಾ ತಾಲೂಕುಗಳನ್ನು ಮತ್ತು ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ ಮತ್ತು ಯಾದಗಿರಿ ತಾಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶದ ಒಟ್ಟು ವಿಸ್ತೀರ್ಣ 17.65. ಲಕ್ಷ ಹೆಕ್ಟೇರುಗಳಾಗಿದ್ದು, 13.27 ಲಕ್ಷ ಹೆಕ್ಟೇರು ಪ್ರದೇಶ ಸಾಗುವಳಿಗೊಳಪಟ್ಟಿವೆ. ಸರಾಸರಿ ಮಳೆ 710 ಮಿ. ಮೀ. ಏಪ್ರಿಲ್ ಮತ್ತು ಮೇ



ತಿಂಗಳುಗಳಲ್ಲಿ ಸುಮಾರು $43^0$ ರಿಂದ $44\ ^0$ಸೆಲ್ಸಿಯಸ್ ವರೆಗಿನ ಹೆಚ್ಚಿನ ಉಷ್ಣತೆಯು ಈ ಪ್ರದೇಶದ ಮುಖ್ಯ ವಿಶೇಷತೆ. ಪ್ರಮುಖವಾಗಿ ಮಧ್ಯಮದಿಂದ ಆಳದ ಕಪ್ಪು ಭೂಮಿಯು ಹೆಚ್ಚಿನ ಪ್ರದೇಶಗಳಲ್ಲಿ ಹರಡಿದ್ದು, ಯಾದಗಿರಿ, ಶಹಪೂರ,ಸುರಪುರ, ದೇವದುರ್ಗ, ಮಾನ್ವಿ ಮತ್ತು ರಾಯಚೂರು ಭಾಗದಲ್ಲಿ ಮಾತ್ರ ಹಗುರವಾದ ಕೆಂಪು ಮಣ್ಣು ಕಂಡು ಬರುತ್ತದೆ. ಈಶಾನ್ಯದ ಈ ಒಣ ಪ್ರದೇಶದ 1.56 ಲಕ್ಷ ಹೆಕ್ಟೇರು ಜಮೀನು ನೀರಿನ ಸೌಲಭ್ಯ ಪಡೆದಿದ್ದು, ಇದು ಒಟ್ಟು ಸಾಗುವಳಿ, ಪ್ರದೇಶದ ಪ್ರತಿಶತ 11.9 ರಷ್ಟಾಗಿದ್ದು , ಒಟ್ಟು ನೀರಾವರಿಯ ಪ್ರತಿಶತ 80 ರಷ್ಟು ಕ್ಷೇತ್ರ ಕಾಲುವೆಗಳಿಂದ ನೀರನ್ನು ಪಡೆಯುತ್ತಿದೆ. ಮುಖ್ಯವಾಗಿ ಮುಂಗಾರು ಬೇಸಾಯ ಪ್ರದೇಶವೆಂದು ವಿಂಗಡಿಸಲಾಗಿದ್ದರೂ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಬೀಳುವ ದೊಡ್ಡ ಮಳೆಗಳಿಂದಾಗಿ ಈ ಪ್ರದೇಶವನ್ನು ಹೆಚ್ಚಾಗಿ ಹಿಂಗಾರು ಕೃಷಿ ಬೆಳೆಗಳನ್ನು ಬೆಳೆಯುವ ಪ್ರದೇಶವೆಂದು ವರ್ಗೀಕರಿಸಲಾಗಿದೆ.

## ವಲಯ-3

ಉತ್ತರದ ಒಣ ಪ್ರದೇಶ ರಾಜ್ಯದ ಕೃಷಿ ವಲಯಗಳಲ್ಲಿ ಅತಿ ದೊಡ್ಡ ಪ್ರದೇಶವಾಗಿದ್ದು, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಬೆಳಗಾವಿ, ಗದಗ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ಒಟ್ಟು 35 ತಾಲೂಕುಗಳನ್ನು ಹೊಂದಿದೆ. ಈ ಪ್ರದೇಶದ ಒಟ್ಟು ವಿಸ್ತೀರ್ಣ 47.84 ಲಕ್ಷ ಹೆಕ್ಟೇರುಗಳಾಗಿದ್ದು, ಅದರಲ್ಲಿ 36.63 ಲಕ್ಷ ಹೆಕ್ಟೇರು ಜಮೀನು ಸಾಗುವಳಿಗೊಳಪಟ್ಟಿದೆ. ಆದಾಗ್ಯೂ ಕೇವಲ 30-35 ಮಳೆ ದಿನಗಳಲ್ಲಿ ಬೀಳುವ ಅತಿ ಕಡಿಮೆ ಪ್ರಮಾಣದ ಮಳೆ (574 ಮಿ.ಮೀ.) ಈ ಪ್ರದೇಶದ ವೈಶಿಷ್ಟವಾಗಿದೆ. ಕಪ್ಪು ಮತ್ತು ಕೆಂಪು ಮಣ್ಣುಗಳೆರಡೂ ಇಲ್ಲಿ ಕಂಡು ಬರುತ್ತಿದ್ದು, ವಿವಿಧ ಆಳದ ಕಪ್ಪು ಮಣ್ಣಿನ ಕ್ಷೇತ್ರ ಹೆಚ್ಚಾಗಿರುವ ಈ ಪ್ರದೇಶವು ವಿಜಯಪುರ , ಬಾಗಲಕೋಟೆ, ರಾಯಚೂರು, ಗದಗ, ಹಾವೇರಿ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರದೇಶವು ವಿವಿಧ ಮೂಲಗಳಿಂದ ನೀರಿನ ಸೌಕರ್ಯ ಕೂಡ ಪಡೆದಿದೆ. ನೀರಾವರಿಗೊಳಪಟ್ಟ ಒಟ್ಟು ಜಮೀನು ಸುಮಾರು 5.82 ಲಕ್ಷ ಹೆಕ್ಟೇರುಗಳಾಗಿದ್ದು ಇದು ಒಟ್ಟು ಸಾಗುವಳಿ ಪ್ರದೇಶದ ಶೇ. 11.78 ರಷ್ಟಿರುತ್ತದೆ. ಮಳೆಯ ವಿಂಗಡನೆಯಲ್ಲಿ ಎರಡು ಶೃಂಗಗಳಿದ್ದು , ಸೆಪ್ಟೆಂಬರದಲ್ಲಿಯ ಪ್ರಮಾಣವು ಎರಡನೆಯ ಹೆಚ್ಚು ಮಳೆ ಬೀಳುವ ತಿಂಗಳಾದ ಜುಲೈಗಿಂತಲೂ ಹೆಚ್ಚಾಗಿದ್ದುದರಿಂದ ಈ ಭಾಗವನ್ನು ಪ್ರಮುಖ ಹಿಂಗಾರಿ ಬೆಳೆ ಪ್ರದೇಶವೆಂದು ಗುರುತಿಸಲಾಗಿದೆ. ವಿವಿಧ ಬೆಳೆಗಳನ್ನು ಈ ಪ್ರದೇಶದಲ್ಲಿ ಸಾಗುವಳಿ

ಮಾಡಲಾಗುತ್ತಿದೆ. ಈ ಭಾಗದ ವಿಜಯಪುರ ,ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ರಾಜ್ಯದ ಪ್ರಮುಖ ತೋಟಗಾರಿಕೆ ಜಿಲ್ಲೆಗಳೆಂದು ಪರಿಗಣಿಸಲಾಗಿದೆ.

**ವಲಯ-8**

ಉತ್ತರದ ಅರೆಮಲೆನಾಡು ಪ್ರದೇಶವು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನಿಂದ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನವರೆಗೂ ಹರಡಿರುವ ಕಡಿಮೆ ಅಗಲದ ಪಟ್ಟಿಯಾಗಿದ್ದು, 12.11 ಲಕ್ಷ ಹೆಕ್ಟೇರಿನ ಒಟ್ಟು ವಿಸ್ತೀರ್ಣ ಮತ್ತು 9.45 ಲಕ್ಷ ವಿಸ್ತೀರ್ಣ ಸಾಗುವಳಿ ಪ್ರದೇಶ ಪಡೆದಿದೆ. ಇದರಲ್ಲಿ 0.82 ಲಕ್ಷ ಹೆಕ್ಟೇರು ಜಮೀನು ನೀರಾವರಿ ಗೊಳಪಟ್ಟಿದೆ. ಈ ಪ್ರದೇಶದಲ್ಲಿ ಹಲವು ಬಗೆಯ ಸಮ್ಮಿಶ್ರಿತ ಮಣ್ಣು ಕಂಡು ಬರುತ್ತದೆ. ದಕ್ಷಿಣ ಭಾಗದಲ್ಲಿ ಕೆಂಪು ಮರಳು ಮತ್ತು ಗೋಡು ಮಣ್ಣು ಹೆಚ್ಚಾಗಿದ್ದು,ಅಲ್ಲದೇ ಆಳವಾದ ಕಪ್ಪು ಮಣ್ಣು, ಜಲ್ಲಿ ಮಣ್ಣು ಹಾಗೂ ಕೆಂಪು -ಕಪ್ಪು ಸಮ್ಮಿಶ್ರಿತ ಮಣ್ಣು ಸಹ ಕಂಡು ಬರುತ್ತದೆ. ಉತ್ತರ ಭಾಗದಲ್ಲಿ ಸಾಧಾರಣ ಆಳದ ಕಪ್ಪು ಜೇಡಿ, ಕೆಂಪು ಮರಳು ಮಿಶ್ರಿತ ಗೋಡು ಕಾಣಬರುತ್ತದೆ. ಈ ಭಾಗದ ನೈಋತ್ಯ ಮತ್ತು ಈಶಾನ್ಯ ಮಾರುತಗಳಿಂದಲೂ ಮಳೆ ಪಡೆಯುತ್ತದೆ. ಈ ಪ್ರಾಂತ್ಯದಲ್ಲಿ ಬೀಳುವ ವಾರ್ಷಿಕ ಮಳೆಯ ಪ್ರಮಾಣ 619 ದಿಂದ 1303 ಮಿ.ಮೀ. ಇರುತ್ತದೆ. ಶೇ. 84ರಷ್ಟು ಮಳೆ ಮೇ ನಿಂದ ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಬೀಳುತ್ತದೆ. ಉತ್ತಮ ಮಳೆ ಹಂಚಿಕೆಯಿಂದಾಗಿ ಮುಂಗಾರು ಮತ್ತು ಹಿಂಗಾರು ಹಂಗಾಮುಗಳೆರಡರಲ್ಲೂ ಬೆಳೆ ಬೆಳೆಯಬಹುದಾಗಿದೆ.

**ವಲಯ-9**

ಮಲೆನಾಡು ಪ್ರದೇಶವು ಕಡಿಮೆ ಅಗಲವಾಗಿದ್ದು, ಪೂರ್ವದ ಅರೆಮಲೆನಾಡು ಮತ್ತು ಪಶ್ಚಿಮದ ಕರಾವಳಿ ಪ್ರದೇಶಗಳೆರಡರ ಮಧ್ಯದ ಭಾಗವಾಗಿದೆ. ಪ್ರದೇಶದ ಒಟ್ಟು ವಿಸ್ತೀರ್ಣ 25,670.6 ಚ. ಕಿ.ಮೀ. ಗಳಾಗಿದ್ದು, ರಾಜ್ಯದ ಒಟ್ಟು ಪ್ರದೇಶದ ಶೇ. 13.25 ರಷ್ಟಾಗಿದೆ. ಜಾರು ಮೇಲ್ಮೈಯ ಬೆಟ್ಟಗಳು ಮತ್ತು ಆಳವಾದ ಕೊಳ್ಳಗಳು ಈ ಪ್ರದೇಶದ ಪ್ರಮುಖ ಲಕ್ಷಣಗಳು. ಮರಳು ಮಿಶ್ರಿತ ಗೋಡು ಮತ್ತು ಜೇಡಿ ಮಿಶ್ರಿತ ಗೋಡು ಪ್ರದೇಶ ಕಂಡು ಬರುತ್ತದೆ. ಖಾನಾಪುರ, ಕಲಘಟಗಿ, ಹಾನಗಲ್ ಮತ್ತು ಮುಂಡಗೋಡದ ಕೆಲವು ಭಾಗಗಳಲ್ಲಿ ಎರೆ ಮಣ್ಣು ಕೂಡ ಇರುವುದುಂಟು. ಭತ್ತ, ಕಬ್ಬು ಮತ್ತು ತೋಟಗಾರಿಕೆ ಬೆಳೆಗಳು ಈ ಪ್ರದೇಶದ ಮುಖ್ಯ ಬೆಳೆಗಳಾಗಿವೆ. ಇತ್ತೀಚೆಗೆ ಗೋವಿನ ಜೋಳ, ಹತ್ತಿ, ತೊಗರಿ ಮತ್ತು ಸೋಯಾ ಅವರೆ ಬೆಳೆಗಳು ಮೇಲ್ನಾಡಿನಲ್ಲಿ (ಮೇಗಟ್ಟಿ/ವಾರಿ ಜಮೀನಿನಲ್ಲಿ) ಕಂಡುಬರುತ್ತಿವೆ.



**ವಲಯ-10**

ಕರಾವಳಿ ಪ್ರದೇಶವು 3500 ಮಿ.ಮೀ. ನಷ್ಟು ಹೆಚ್ಚು ಮಳೆ ಪಡೆಯುತ್ತಿದ್ದು ಜಂಬಿಟ್ಟಿಗೆ ಮಣ್ಣಿನಿಂದ ಕೂಡಿದೆ. ಪ್ರಮುಖವಾಗಿ ಭತ್ತ, ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಶೇಂಗಾ ಮತ್ತು ಬೇಳೆ ಕಾಳುಗಳಾದ ಅಲಸಂದಿ, ಕರಿಹೆಸರು, ಉದ್ದು ಕರಿಸೋಯಾ ಅವರೆ ಮತ್ತು ಹಸಿರೆಲೆ ಗೊಬ್ಬರ ಬೆಳೆಯಾದ ಸಣಬನ್ನು ಭತ್ತದ ನಂತರ ಉಳಿದ ಹಸಿಯ ಮೇಲೆ ಬೆಳೆಯಲಾಗುತ್ತದೆ.

ಮಳೆಯ ಪ್ರಮಾಣ ಸಮುದ್ರ ಮಟ್ಟದಿಂದ ಪ್ರದೇಶದ ಎತ್ತರ, ಮಣ್ಣಿನ ವಿಧಗಳು ಮತ್ತು ಬೆಳೆ ಪದತಿಗಳ ಆಧಾರದ ಮೇಲೆ ವಿವಿಧ ಕೃಷಿ ವಲಯ/ಪ್ರದೇಶಗಳನ್ನು ರಚಿಸಲಾಗಿದೆ. ಆದಾಗ್ಯೂ ಪ್ರದೇಶವೊಂದರ ವಿವಿಧ ಭಾಗಗಳಲ್ಲಿ ಹಲವು ತೆರನಾದ ಸೂಕ್ಷ್ಮ ಹವಾಗುಣದ ಸ್ಥಿತಿಗತಿಗಳು ಕಂಡು ಬರುತ್ತವೆ. ಹೀಗಾಗಿ ಕೃಷಿ ವಲಯಗಳನ್ನು ಹೆಚ್ಚಿನ ಸಂಸ್ಕರಣೆಗೊಳಪಡಿಸಿ ಮುಖ್ಯವಾಗಿ ಮಣ್ಣಿನ ಮಾದರಿ, ವ್ಯವಸಾಯ ಸ್ಥಿತಿಗತಿಗಳು ಅಂದರೆ, ಮಳೆಯಾಶ್ರಿತ/ನೀರಾವರಿ, ಏಕಬೆಳೆ,ದ್ವಿಬೆಳೆ, ಕೆರೆ ನೀರಾವರಿ ಹಾಗೂ ಇನ್ನಿತರ ವಿಷಯಗಳನ್ನು ಪರಿಗಣಿಸಿ ಕೃಷಿ ವಲಯಗಳನ್ನು ಮತ್ತೆ ಹಲವು ಕೃಷಿ ಸನ್ನಿವೇಶಗಳನ್ನಾಗಿ ವರ್ಗೀಕರಿಸಲಾಗಿದೆ. ಆದುದರಿಂದ ಪ್ರತಿ ಕೃಷಿ ವಲಯವು ತನ್ನದೇ ಆದ ವಿಭಿನ್ನ ಕೃಷಿ ಸನ್ನಿವೇಶಗಳನ್ನು ಹೊಂದಿದೆ.

♦♦♦

# ಉತ್ತರ ಕರ್ನಾಟಕದ ವಿವಿಧ ಕೃಷಿ ವಲಯಗಳು

